**ಮಧ್ಯಂತರ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ 151 ರಡಿ ಅರ್ಜಿ**

ಅರ್ಜಿದಾರರು ಈ ಮೇಲ್ಕಂಡ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಅರ್ಜಿದಾರರು/ವಾದಿಯು ಸದರಿ ದಾವೆಯಲ್ಲಿ ಅರ್ಜಿಯಲ್ಲಿ ತಿಳಿಸಿರುವಂತೆ ವಾದ ಪತ್ರದಲ್ಲಿ ತಿದ್ದುಪಡಿ ಮಾಡಲು ಅನುಮತಿಯನ್ನು ನೀಡಬೇಕೆಂದು ಕೇಳಿಕೊಂಡಿತ್ತಾರೆ.

2. ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಸದರಿ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿನ ವಿರುದ್ಧ, ಕರಾರಿನ ನಿರ್ಧಿಷ್ಟ ನೆರವೇರಿಕೆಗೆ ಸಂಬಂಧಿಸಿದಂತೆ ದಾವಾ ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ, ಈ ದಾವೆಯನ್ನು ಹೂಡಿದ್ದು, ಲಿಖಿತ ಹೇಳಿಕೆಯ ಪ್ಯಾರಾ-9 ಮತ್ತು 13 ರಲ್ಲಿ ಬಿ.ರಮೇಶರವರಿಗೆ ಮೊದಲನೇ ಹೆಂಡತಿ ಲೇಟ್ ಮಾಲತಿ ಇದ್ದು, ಅವರಿಗೆ ಒಬ್ಬ ಮಗನಿರುತ್ತಾನೆ ಎಂದು ಪ್ರತಿವಾದಿಗಳು ಹೇಳಿದ್ದು, ತದನಂತರ ಪ್ರತಿವಾದಿ-3 ರವರನ್ನು ಈ ದಾವೆಯಲ್ಲಿ ಸೇರ್ಪಡಿಸಿದ್ದು, ಅದರ ಸಂಗತಿಗಳನ್ನು ತಿದ್ದುಪಡಿ ಮಾಡಬೇಕಾಗಿರುತ್ತದೆ. ಮುಂದುವರೆದು ವಾದಿಯು ಹೇಳುವುದೇನೆಂದರೆ ಈ ಹಿಂದೆ ಈ ದಾವೆಯನ್ನು ಕರಾರಿನ ನಿರ್ದಿಷ್ಟ ಪಾಲನೆಗೆ ಮಾತ್ರ ಸಲ್ಲಿಸಿದ್ದು, ತದನಂತರ ವಾದಿಯ ವಕೀಲರು ಪರಿಹಾರ ಅಂಕಣದಲ್ಲಿ ನಿರ್ಧಿಷ್ಟ ಪರಿಹಾರ ಕಾಯ್ದೆ ಕಲ.22(2) ರಂತೆ ತಿದ್ದುಪಡಿ ಮಾಡಬೇಕೆಂದು ಹೇಳಿದ್ದು, ಅದರಂತೆ ಪರಿಹಾರ ಅಂಕಣದಲ್ಲಿ ತಿದ್ದುಪಡಿ (ಸಿ1) ನ್ನು ಸೇರಿಸಬೇಕಾಗಿರುತ್ತದೆ. ಮುಂದುವರೆದು ಮೇಲ್ಕಂಡ ತಿದ್ದುಪಡಿಯು ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣವನ್ನು ಬದಲಿಸುವಂತ ತಿದ್ದುಪಡಿಯಾಗಿರುವುದಿಲ್ಲ.ಈ ಮೇಲ್ಕಂಡ ಕಾರಣವು ಸದುದ್ದೇಶದಿಂದ ಕೂಡಿದಂತ ಕಾರಣವಾಗಿರುತ್ತದೆ. ಈ ಮಧ್ಯಕಾಲಿನ ಅರ್ಜಿಯನ್ನು ಪುರಸ್ಕರಿಸಿದ ಪಕ್ಷದಲ್ಲಿ, ಪ್ರತಿವಾದಿಗಳಿಗೆ ಯಾವುದೇ ತೊಂದರೆ ಕಷ್ಟ ಉಂಟಾಗುವುದಿಲ್ಲ, ಒಂದು ವೇಳೆ

ತಿರಸ್ಕರಿಸಿದರಲ್ಲಿ ಅರ್ಜಿದಾರರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ನಮೂದಿಸಿರುತ್ತಾರೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

3. ಪ್ರತಿವಾದಿ ಸಂಖ್ಯೆ.1 ರವರು ಸದರಿ ಮೇಲ್ಕಂಡ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಮೇಲುನೋಟಕ್ಕೆ ಊರ್ಜಿತವಾಗತಕ್ಕದ್ದಲ್ಲ ಹಾಗೂ ವಜಾ ಆಗತಕ್ಕದ್ದಾಗಿರುತ್ತದೆ. ಮುಂದುವರೆದು, ವಾದಿಯು ದಾವಾ ಪತ್ರ 6[ಎ] ಕಂಡಿಕೆಯನ್ನು ದಾವಾಪತ್ರದಲ್ಲಿ ಸೇರಿಸಬೇಕೆಂತಲೂ ಮತ್ತು ದಾವಾ ಪತ್ರದ ಪ್ರಾರ್ಥನೆಯ ಕಾಲಂ [ಸಿ1] ಮತ್ತು ಪ್ರತಿಪಾದನೆಯ (counter claim) ವಿವರಗಳನ್ನು ಸೇರಿಸಬೇಕೆಂತಲೂ ಈ ದಾವೆಯಲ್ಲಿ ಕರಾರು ನಿರ್ದಿಷ್ಟ ನೆರವೇರಿಕೆ ತೀರ್ಪು ಮಾಡಲು ಸಾದ್ಯವಾಗದಿದ್ದರೆ ರೂ 5,00,000/- ಗಳನ್ನು 12% ರಂತೆ ದಿನಾಂಕ:17-6-2011 ರಿಂದ ಪ್ರತಿವಾದಿಗಳಿಂದ ಕೊಡಿಸಿ ಕೊಡುವಂತೆ ದಾವಾ ಪತ್ರ ತಿದ್ದುಪಡಿ ಕೋರಿ ಮದ್ಯಂತರ ಅರ್ಜಿ ಸಲ್ಲಿಸಿದ್ದು, ಈ ದಾವೆಯು ಎಲ್ಲಾ ವಿಚಾರಣೆ ಮುಗಿದು ಈ ದಾವೆಯು ಮುಖ್ಯ ವಾದಕ್ಕಾಗಿ ಇದ್ದಂತ ಸಮಯದಲ್ಲಿ ದಾವಾ ಪತ್ರ ತಿದ್ದುಪಡಿ ಮಾಡುವಂತೆ ಕೋರಿ ಈ ಮದ್ಯಂತರ ಅರ್ಜಿಯನ್ನು ಸಲ್ಲಿಸಿರುವುದರಿಂದ ಈ ಮದ್ಯಂತರ ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ ಮೇಲುನೋಟಕ್ಕೆ ವಜಾ ಆಗತಕ್ಕದ್ದಾಗಿರುತ್ತದೆ. ಮುಂದುವರೆದು, ಪ್ರಮಾಣ ಪತ್ರ ಕಂಡಿಕೆ 3 ರಲ್ಲಿ ಬಿ. ರಮೇಶ್ ಎನ್ನುವವರಿಗೆ ಮೊದಲನೆ ಹೆಂಡತಿ ಲೇಟ್ ಮಾಲತಿ ಇದ್ದು, ಅವರಿಗೆ ಒಬ್ಬ ಮಗನಿರುತ್ತಾನೆಂದು ಲಿಖಿತ ಹೇಳಿಕೆಯ ಕಂಡಿಕೆ 9 ಮತ್ತು 13 ರಲ್ಲಿ ತಿಳಿಸಿರುತ್ತಾರೆಂದು ತಿಳಿಸಿದ್ದು ಪ್ರತಿವಾದಿಗಳು ಬಹಳ ವರ್ಷಗಳ ಹಿಂದೆಯೇ ತಮ್ಮ ಲಿಖಿತ ನಂತರ ಆ ಬಗ್ಗೆ ಹೇಳಿಕೆಯನ್ನು ಸಲ್ಲಿಸಿದ್ದು ವಿವಾದಾಂಶಗಳು ಸಹಾ ಆಗಿದ್ದು ವಿಚಾರಣೆ ಸಹಾ ಆಗಿದ್ದು ಈ ದಾವೆಯು ವಾದಕ್ಕಾಗಿ ಇರುತ್ತದೆ.

4. ಮುಂದುವರೆದು ಪ್ರತಿವಾದಿ ಸಂಖ್ಯೆ.1 ರವರು ಹೇಳುವುದೇನೆಂದರೆ, ವಾದಿಯು ತದನಂತರದಲ್ಲಿ 3 ನೇ ಪ್ರತಿವಾದಿಯನ್ನು ಸೇರ್ಪಡಿಸಿದ್ದೇನೆಂದು ತಿಳಿಸಿದ್ದು, ಕಾನೂನಿನ

ಪ್ರಕಾರ ದಾವಾ ಸ್ವತ್ತಿನ ಬಗ್ಗೆ ಕರಾರು ಪತ್ರ ಆಗಿದ್ದ ಪಕ್ಷದಲ್ಲಿ ಈ ದಾವೆ ಸಲ್ಲಿಸುವ ಮೊದಲೇ 3 ನೇ ಪ್ರತಿವಾದಿಗೆ ನೋಟಿಸ್ಸು ಸಹಾ ಕೊಡಬೇಕಾಗಿತ್ತು. ಈ ದಾವೆಯಲ್ಲಿ 3 ನೇ ಪ್ರತಿವಾದಿಗೆ ಕಾನೂನಿನ ಪ್ರಕಾರ ನೋಟೀಸನ್ನು ಸಹಾ ಕೊಟ್ಟಿರುವುದಿಲ್ಲ. ಈ ಕಾರಣದಿಂದಲೂ ಸಹಾ ವಾದಿ ಸಲ್ಲಿಸಿರುವ ಮದ್ಯಂತರ ಅರ್ಜಿ ಹಾಗೂ ಈ ದಾವೆಯು ವಜಾ ಅಗತಕ್ಕದ್ದಾಗಿರುತ್ತದೆ. ವಾದಿ ತನ್ನ ಮದ್ಯಂತರ ಅರ್ಜಿಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಷಯಗಳು ಸುಳ್ಳಿನಿಂದ ಕೂಡಿದವುಗಳಾಗಿರುತ್ತವೆ. ಮುಂದುವರೆದು, ವಾದಿಯು ಬಿ.ರಮೇಶ್ ಎನ್ನುವವರ ದುಶ್ಕಟಗಳನ್ನು ಸೃಷ್ಟಿಸಿಕೊಂಡಿರುವ ದುರುಪಯೋಗಪಡಿಸಿಕೊಂಡು ಕ್ರಯದ ಕರಾರು ಪತ್ರವಾಗಿರುತ್ತದೆ. ಮುಂದುವರೆದು ವಾದಿಯು ಯಾವುದೇ ಹಣವನ್ನು ಒಂದನೇ ಪ್ರತಿವಾದಿ ಯ ಗಂಡನಾದ ಬಿ.ರಮೇಶ್‌ರವರಿಗಾಗಲಿ ಅಥವ ಅವರ ಎರಡನೇ ಪತ್ನಿಯಾದ ಒಂದನೇ ಪ್ರತಿವಾದಿಗಾಗಲಿ ಕ್ರಯದ ಕರಾರು ಪತ್ರದ ಮೂಲಕ ಹಣವನ್ನು ಕೊಟ್ಟಿರುವುದಲ್ಲ. ವಾದಿಯು ದಾವೆಯು ವಜಾ ಆಗುತ್ತದೆಂದು ತಿಳಿದು ಸುಳ್ಳು ಮಾಹಿತಿಗಳೊಂದಿಗೆ ದಾವಾ ಪತ್ರ ತಿದ್ದುಪಡಿ ಮಾಡಲು ವಾದಿಯು ಸಲ್ಲಿಸಿರುವ ಮದ್ಯಂತರ ಅರ್ಜಿಯಾಗಿರುತ್ತದೆ. ಮುಂದುವರೆದು, ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯವು ದಾವೆಯ ವಿಚಾರಣೆ ಪ್ರಾರಂಬವಾದ ನಂತರ ದಾವಾ ಪತ್ರ ತಿದ್ದುಪಡಿ ಮಾಡಲು ಅನುಮತಿ ನೀಡಬಾರದೆಂದು ಹಲವಾರು ತೀರ್ಪುಗಳಲ್ಲಿ ತಿಳಿಸಿರುತ್ತದೆ. ಈ ಬಗ್ಗೆ ವಾದ ಮಾಡುವ ಸಮಯದಲ್ಲಿ ಪ್ರತಿವಾದಿಯು ತಿರ್ಪನ್ನು ಹಾಜರು ಪಡಿಸುತ್ತಾರೆ. ಮುಂದುವರೆದು ನ್ಯಾಯಾಲಯವು ತಿದ್ದುಪಡಿಗೆ ಅನುಮತಿ ಕೊಟ್ಟಲ್ಲಿ ಈ ದಾವೆಯು 2014 ರ ದಾವೆಯಾಗಿದ್ದು ಪುನಃ ಹೊಸ ದಾವೆಯಾಗಿ ಪರಿವರ್ತನೆಗೊಳುತ್ತದೆ. ಪುನಃ ವಾದಿ ಮತ್ತು ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆ, ವಿಚಾರಣೆ ಇತ್ಯಾದಿ ಕೊಡುವುದರಿಂದ ಈ ದಾವೆಯನ್ನು ತೀರ್ಮಾನ ಮಾಡಲು ಹಲವಾರು ವರ್ಷಗಳೇ ಆಗುತ್ತದೆ. ವಾದಿಗಳು ಈ ಮದ್ಯಂತರ ಅರ್ಜಿಯನ್ನು ಸದ್ದುದ್ದೇಶ ದಿಂದ ಸಲ್ಲಿಸಿರುವುದಿಲ್ಲ. ವಾದಿ ಕೇಳಿರುವ ತಿದ್ದುಪಡಿಯು ಕಾಲ ಪರಿಮಿತಿಯನ್ನು ಮೀರಿರುವುದಾಗಿರುತ್ತದೆ. ವಾದಿಯು ಇಷ್ಟು ವರ್ಷಗಳ ಕಾಲಾ ಏಕೆ ತಿದ್ದುಪಡಿ ಮಾಡಲು ಸಾದ್ಯವಾಗಿರಲಿಲ್ಲವೆಂದು ತನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ಈ

ನ್ಯಾಯಾಲುವು ವಾದಿ ಸಲ್ಲಿಸಿರುವ ಮದ್ಯಂತರ ಅರ್ಜಿಯನ್ನು ಪುರಸ್ಕರಿಸಿದರೆ ಈ ಪ್ರತಿವಾದಿಗಳಿಗೆ ತುಂಬಲಾರದ ತೊಂದರೆ ಹಾಗೂ ನಷ್ಟ ಉಂಟಾಗುತ್ತದೆ. ವಾದಿಯ ಮದ್ಯಂತರ ಅರ್ಜಿಯನ್ನು ವಜಾಗೊಳಿಸಿದರೆ ವಾದಿಗೆ ಯಾವುದೇ ರೀತಿಯ ತೊಂದರೆ ಸಹಾ ಆಗಿವುದಿಲ್ಲ. ಆದ್ದರಿಂದ ಸದರಿ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

5. ವಾದಿ ಮತ್ತು ಪ್ರತಿವಾದಿಗಳ ವಾದ ಮತ್ತು ತಕರಾರರನ್ನು ಕೇಳಲಾಯಿತು.

6. ಅರ್ಜಿದಾರರು ಸದರಿ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿನ ಕರಾರಿನ ನಿರ್ಧಿಷ್ಟ ನೆರವೇರಿಕೆಗೆ ಸಂಬಂಧಿಸಿದಂತೆ ದಾವಾ ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ, ಈ ದಾವೆಯನ್ನು ಹೂಡಿದ್ದು, ಸದರಿ ಅರ್ಜಿಯಲ್ಲಿ ವಿಸ್ತಾರವಾಗಿ ತಿಳಿಸಿರುವಂತೆ ತಿದ್ದುಪಡಿ ವಿಷಯಗಳು ವಾದಿಯ ದಾವೆಯನ್ನು ಸಾಬೀತುಪಡಿಸಲು ಅತ್ಯವಶ್ಯಕವಾಗಿದ್ದು, ಸದರಿ ಅರ್ಜಿಯನ್ನು ತಿದ್ದುಪಡಿ ಮಾಡಿದ್ದರೆ ದಾವಾದ ಸ್ವಾಭಾವಿಕತೆ ಮತ್ತು ವ್ಯಾಜ್ಯಕಾರಣ ಬದಲಾಗುವುದಿಲ್ಲ. ಆದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ. ಸದರಿ ಅರ್ಜಿಗೆ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ ಹಾಗೂ ವಜಾ ಅಗತಕ್ಕದ್ದಾಗಿರುತ್ತದೆ. ಮುಂದುವರೆದು ನ್ಯಾಯಾಲಯವು ತಿದ್ದುಪಡಿಗೆ ಅನುಮತಿ ಕೊಟ್ಟಲ್ಲಿ ಈ ದಾವೆಯು 2014 ರ ದಾವೆಯಾಗಿದ್ದು ಪುನಃ ಹೊಸ ದಾವೆಯಾಗಿ ಪರಿವರ್ತನೆಗೊಳುತ್ತದೆ. ವಾದಿಯು ಈ ದಾವೆಯನ್ನು ನಿಧಾನಗತಿಯಲ್ಲಿ ಮುಂದೂಡುವ ದುರುದ್ದೇಶದಿಂದ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಗಳ ಮಧ್ಯಂತರ ಅರ್ಜಿಯು ಕಾನೂನಿನ ಪ್ರಕಾರ ಊರ್ಜಿತವಾಗತಕ್ಕದ್ದಲ್ಲ.

7. ಅರ್ಜಿಯ ಜೊತೆಗಿನ ದಾಖಲೆಗಳು ಮತ್ತು ಪ್ರಮಾಣ ಪತ್ರ ಮತ್ತು ಪ್ರತಿವಾದಿಗಳು ಸಲ್ಲಿಸಿದ ಆಕ್ಷೇಪಣೆಯನ್ನು ಪರಿಶೀಲಿಸಲಾಗಿದೆ. ಪ್ರಸುತ್ತ ದಾವೆಯನ್ನು ವಾದಿಯು ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿನ ಕರಾರಿನ ನಿರ್ಧಿಷ್ಟ ನೆರವೇರಿಕೆಗೆ ಸಂಬಂಧಿಸಿದಂತೆ ದಾವಾ ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ, ಈ ದಾವೆಯನ್ನು ಹೂಡಿದ್ದು, ಅರ್ಜಿದಾರರು ಪ್ರಸ್ತಾವಿತ ತಿದ್ದುಪಡಿ ಅರ್ಜಿಯನ್ನು ವಾದ ಪತ್ರದಲ್ಲಿನ 4 ನೇ ಪುಟ ಸಂಖ್ಯೆಯಲ್ಲಿ 6 ರನೇ ಕಂಡಿಕೆಯ ನಂತರ 6(ಎ) ಮತ್ತು ಪ್ರಾರ್ಥನೆಯ ಭಾಗದಲ್ಲಿ ಸಿ ನಂತರದ ಕಂಡಿಕೆಯಲ್ಲಿ ಸಿ(1) ಮತ್ತು ಪ್ರತಿಪಾದನೆಯ (counter claim) ವಿವರಗಳನ್ನುಸೇರಿಸಲು ಉದ್ದೇಶಿಸಿದ್ದು, ಸದರಿ ಅರ್ಜಿಯನ್ನು ಹೂಡಲಾಗಿರುತ್ತದೆ. ಈಗ ಪ್ರಸುತ್ತ ದಾವೆಯಲ್ಲಿ ಪ್ರತಿವಾದಿಗಳ ಅಡ್ಡವಿಚಾರಣೆಯ ನಂತರ, ವಾದ ಮಂಡನೆಯ ಹಂತದಲ್ಲಿರುತ್ತದೆ. ವಾದಿಯೆ ನ್ಯಾಯಾಲಯದ ಮುಂದೆ ಕರಾರಿನ ನಿರ್ಧಿಷ್ಟ ನೆರವೇರಿಕೆಗಾಗಿ ದಾವೆ ಹೂಡಿದ್ದು ಮತ್ತು ಸದರಿ ವಾದಿಯು ಕೇಳಿರುವ ತಿದ್ದುಪಡಿಯ ಈ ದಾವೆಯಲ್ಲಿ ಅವಶ್ಯಕವಾಗಿರುತ್ತವೆ. ಆಗಿರುವಲ್ಲಿ ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗೆ ಇರುವ ಹಕ್ಕನ್ನು ಮೋಟಕುಗೊಳಿಸಿದಂತಹಗುತ್ತದೆ ಮತ್ತು ಪ್ರಸ್ತಾವಿತ ತಿದ್ದುಪಡಿಯು ದಾವೆಯ ಸ್ವರೂಪವನ್ನು ಅಥವಾ ಕ್ರಮದ ಕಾರಣವನ್ನು ಬದಲಾಯಿಸುವುದಿಲ್ಲ ಎಂಬ ಅಂಶವು ನ್ಯಾಯಾಲಯಕ್ಕೆ ಕಂಡುಬಂದಿದ್ದು, ಅರ್ಜಿಯನ್ನು ಅನುಮತಿಸಲು ಅರ್ಹವಾಗಿರುವುದರಿಂದ ಈ ಕೆಳಗಿನಂತೆಃ

## ಆದೇಶ

ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿಯ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿ ತಿದ್ದುಪಡಿಯನ್ನು ರೂ.500/- ಖರ್ಚಿನೊಂದಿಗೆ ಅನುಮತಿಸಲಾಗಿದೆ.

ವಾದಿಗೆ/ಅರ್ಜಿದಾರರಿಗೆ ತಿದ್ದುಪಡಿಯನ್ನು ಕೈಗೊಳ್ಳಲು ಮತ್ತು ತಿದ್ದುಪಡಿ ಮಾಡಿದ ಅರ್ಜಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿದೆ.

**1** ನೇ ಅಪರ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರು**,**

ರಾಮನಗರ**.**